# ಜೀವನವನ್ನು ಹಿಂದಿರುಗಿ ನೋಡಿದಾಗ ಖುಷಿಯ ಮಾತು ಸಾಧ್ಯವಾದರೆ ಅದು ಸಂತೃಪ್ತಿಯ ಜೀವನ



## ಕಥಕಳಿ ಕಲಾವಿದ ಸದನಂ ಪಿ.ವಿ. ಬಾಲಕೃಷ್ಣನ್ ಸಂದರ್ಶನ

**ಕೋಡಿಬೆಟ್ಟು ರಾಜಲಕ್ಷ್ಮಿ**

1944ರಲ್ಲಿ ಕೇರಳದ ತಳಿಪರಂಬದಲ್ಲಿ ಹುಟ್ಟಿದ ಸದನಮ್ ಪುತ್ತಿಯವೀಟಿಲ್ ಬಾಲಕೃಷ್ಣನ್ ಕಥಕಳಿಯ ಪ್ರಸಿದ್ಧ ಕಲಾವಿದರು. ಅವರಿಗೆ ಕಥಕಳಿಯ ಬಾಲಪಾಠವು ಕಣ್ಣೂರಿನಲ್ಲಿ ಕುಂಡಿವೀಟಿಲ್ ನಾರಾಯಣನ್ ನಾಯರ್ ಅವರಿಂದ ದೊರೆಯಿತು. 'ಗಾಂಧಿ ಸೇವಾ ಸದನಂ ಕಥಕಳಿ ಅಕಾಡೆಮಿ'ಯಲ್ಲಿ ಅವರಿಗೆ ಪ್ರಸಿದ್ಧ ಗುರು ರಾಮುಣ್ಣಿ ನಾಯರ್ ಮತ್ತು ಕೀಳುಪದಂ ಕುಮಾರನ್ ನಾಯರ್ ಅವರಿಂದ ಹೆಚ್ಚಿನ ತರಬೇತಿ ದೊರೆಯಿತು. ಕಥಕಳಿ ಪ್ರದರ್ಶನ ಮತ್ತು ಬೋಧನೆಯಲ್ಲಿ ಸಿದ್ಧಹಸ್ತರಾಗಿರುವ ಬಾಲಕೃಷ್ಣನ್ ಅವರು ಈ ಕಲಾಪ್ರಕಾರವು ಕೇರಳದ ಹೊರಗೆ ಹೆಚ್ಚು ಪ್ರಚಲಿತವಾಗುವಂತೆ ಶ್ರಮಿಸಿದವರಲ್ಲಿ ಪ್ರಮುಖರು. ರಂಗದ ಮೇಲೆ ನಳಮಹಾರಾಜ, ಶ್ರೀಕೃಷ್ಣ, ಭೀಮ, ರಾವಣ ಮುಂತಾದ ಪಾತ್ರಗಳಲ್ಲಿ ಮಿಂಚಿದವರು. ಬೆಳ್ಳನೆಯ ಗಡ್ಡವಿರಿಸಿ ಅವರು ಪ್ರಸ್ತುತಪಡಿಸುವ ಹನುಮಂತನ ಪಾತ್ರವು ಬಹು ಪ್ರಸಿದ್ಧವಾದುದು. 'ಕಲ್ಯಾಣ ಸೌಗಂಧಿಕಂ', 'ತೋರಣ ಯುದ್ಧಂ' ಮತ್ತು 'ಲವಣಾಸುರ ವಧೆ' ಪ್ರಸಂಗಗಳಲ್ಲಿ ಹನುಮನ ಪಾತ್ರವನ್ನು ಅವರು ಪ್ರಸ್ತುತಪಡಿಸುವ ರೀತಿಯನ್ನು ನೋಡಲು ಪ್ರೇಕ್ಷಕರು ಬಹುಸಂಖ್ಯೆಯಲ್ಲಿ ಜಮಾಯಿಸುವರು. 1974ರಲ್ಲಿ ದೆಹಲಿಯ 'ಇಂಟರ್ ನ್ಯಾಷನಲ್ ಸೆಂಟರ್ ಫಾರ್ ಕಥಕಳಿ ಸಂಸ್ಥೆ' ಸೇರಿದ ಅವರು, 1980ರಲ್ಲಿ ಪ್ರಾಂಶುಪಾಲರಾದರು. ದೇಶ ವಿದೇಶಗಳಲ್ಲಿ ಅನೇಕ ಕಥಕಳಿ ಪ್ರದರ್ಶನಗಳನ್ನು ನೀಡಿದ್ದಲ್ಲದೆ, ಹೊಸ ಕಲಾವಿದರಿಗೆ ಮಾರ್ಗದರ್ಶನ ಮಾಡಿದರು. ಹೊಸ ಪ್ರಸಂಗಗಳನ್ನು ಬರೆದು ಕಲಾವಿದರಿಗೆ ತರಬೇತಿ ನೀಡಿದರು. ಕೇರಳ ರಾಜ್ಯ ಪ್ರಶಸ್ತಿ, ಕೇಂದ್ರ ಸಂಗೀತ ನಾಟಕ ಅಕಾಡೆಮಿ ಪ್ರಶಸ್ತಿ, ಪದ್ಮಶ್ರೀ ಪುರಸ್ಕಾರಗಳು ಅವರಿಗೆ ದೊರೆತಿವೆ. ಅವರೊಡನೆ 'ಮಯೂರ' ನಡೆಸಿದ ಮಾತುಕತೆಯ ಆಯ್ದ ಭಾಗ ಇಲ್ಲಿದೆ.